# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 388 |
| ಸದಸ್ಯರ ಹೆಸರು | : | ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10-12-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಬಳ್ಳಾರಿ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 150ಎ ಸಿರುಗುಪ್ಪ-ಸಿಂಧನೂರು ರಸ್ತೆ ನಿರ್ಮಾಣ ಕಾಮಗಾರಿಯು ಕಳಪೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ; | ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ವಲಯದ NH-150A ಸಿಂಧನೂರು-ಸಿರಗುಪ್ಪ ರಸ್ತೆಯಲ್ಲಿ ಪ್ರಸ್ತುತ ಈ ಕೆಳಕಂಡಂತೆ ಕಾಮಗಾರಿಗಳನ್ನು ಅನುಷ್ಠಾನ ಮಾಡುತ್ತಿದ್ದು, ವಿವರಗಳು ಇಂತಿವೆ:<br>1) ಕಾಮಗಾರಿಯ ಹೆಸರು: ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ವಲಯದ NH-150A ಸಿಂಧನೂರು-ಸಿರಗುಪ್ಪ ರಸ್ತೆ ಭಾಗದ (Widening Two lane with paved shoulders from design km 199.20 (Ex km199.300) to design km 214.880 (Ex km 215.00) of Ibrampur to Tekkalkote of NH-150A Jevargi-Chamarajanagara section in the State of Karnataka on EPC Mode under NH(O) Annual plan 2020-21 (Job No:NH-150A-KNT-2020-21-909) ಅಗಲೀಕರಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>➢ ಸದರಿ ಕಾಮಗಾರಿಯನ್ನು ಮೆ: ಆರ್.ಎಂ.ಎನ್ ಇನಫ್ರಾಸ್ಟ್ರಕ್ಚರ್ ಪ್ರೈ ಲಿಮಿಟೆಡ್ ಹೈದರಾಬಾದ್ ರವರು EPC ಮಾದರಿಯಲ್ಲಿ ಗುತ್ತಿಗೆ ಪಡೆದಿದ್ದು ದಿನಾಂಕ: 09.01.2022 ರಂದು ಪ್ರಾರಂಭಗೊಂಡಿದ್ದು, ಪ್ರಸ್ತುತ 60% ಭೌತಿಕ ಪ್ರಗತಿ ಸಾಧಿಸಿದ್ದು ಕಾಮಗಾರಿಯನ್ನು ಮಾರ್ಚ್-2026 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.<br>➢ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಸರಪಳಿ 204.20 ಕಿ.ಮೀ ರಿಂದ ರಾಯಚೂರು ಜಿಲ್ಲೆಯ ಗಡಿ ವ್ಯಾಪ್ತಿಯವರೆಗಿನ ಸರಪಳಿ 199.20 ಕಿ.ಮೀ ವರೆಗೆ ಒಟ್ಟು 5.00 ಕಿ.ಮೀ ಉದ್ದವಿದ್ದು ಸದರಿ ಭಾಗವು ರಾಷ್ಟ್ರೀಯ ಹೆದ್ದಾರಿ ಬೆಂಗಳೂರು ವಲಯ ವ್ಯಾಪ್ತಿಯ ಚಿತ್ರದುರ್ಗ ವಿಭಾಗಕ್ಕೆ ಒಳಪಟ್ಟಿದ್ದು, ಪ್ರಸ್ತುತ 3.5 ಕಿ.ಮೀ DBM ಪೂರ್ಣಗೊಂಡಿದ್ದು, 1.5 ಕಿ.ಮೀ GSB ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>➢ ಕಾಮಗಾರಿಯ ಪ್ರಗತಿಯ ಪ್ರತಿ ಹಂತದಲ್ಲಿಯೂ ರಸ್ತೆ ನಿರ್ಮಾಣಕ್ಕೆ ಬಳಸುತ್ತಿರುವ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಗಳನ್ನು ಇಲಾಖೆಯ ಲ್ಯಾಬ್‌ಗಳಲ್ಲಿಯೂ ಹಾಗೂ EPC ನಿಯಮಾವಳಿ ಅನ್ವಯ ಮತ್ತು IRC ಕೋಡ್‌ಗಳನ್ವಯ ಮಾಡಲಾಗುತ್ತಿರುತ್ತದೆ.<br><br>2) ಕಾಮಗಾರಿಯ ಹೆಸರು: ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎ ಸಿಂಧನೂರ-ಸಿರುಗುಪ್ಪ ರಸ್ತೆಯ ಭಾಗದ Widening to two lane with Paved shoulders from km 184.70 to km 198.92 (Venkateshwara Camp to Dadesugur Camp Section) on NH-150A in the state of Karnataka in EPC mode under NH(O) Annual plan 2022-23 (Job No. NH-150A- KNT-2022-23-985 ಅಗಲೀಕರಣ ಕಾಮಗಾರಿ ಪ್ರಗತಿಯಲ್ಲಿ ಇರುತ್ತದೆ. |
| 2 | ಕಳಪೆ ಕಾಮಗಾರಿಗೆ ಕಾರಣರಾದ ಅಧಿಕಾರ/ಸಿಬ್ಬದಿಗಳ ಮೇಲೆ ಶಿಸ್ತು ಕ್ರಮಕ್ಕಾಗಿ ಸರ್ಕಾರದಿಂದ ಶಿಫಾರಸ್ಸು ಮಾಡಲಾಗಿದೆಯೇ? (ಮಾಹಿತಿ ನೀಡುವುದು) | |

| | | |
|---|---|---|
| | | ➢ ಸದರಿ ಕಾಮಗಾರಿಯು ಮೆ: ಉದಯಶಿವಕುಮಾರ ಇನ್ಫ್ರಾ ಲಿಮಿಟೆಡ್ ಇವರು EPC ಮಾದರಿಯಲ್ಲಿ ಗುತ್ತಿಗೆ ಪಡೆದಿದ್ದು ದಿನಾಂಕ: 01.05.2024 ರಂದು ಕಾಮಗಾರಿ ಪ್ರಾರಂಭಗೊಂಡಿದ್ದು ಪ್ರಸ್ತುತ 62% ಭೌತಿಕ ಪ್ರಗತಿ ಸಾಧಿಸಲಾಗಿದೆ.<br>➢ ಕಾಮಗಾರಿ ನಿರ್ವಹಣೆಯ ಪ್ರತಿ ಹಂತದಲ್ಲಿಯೂ ರಸ್ತೆ ನಿರ್ಮಾಣಕ್ಕೆ ಬಳಸುತ್ತಿರುವ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಗಳನ್ನು ಇಲಾಖಾ ಲ್ಯಾಬ್‌ಗಳಲ್ಲಿ ಮಾಡಿದ್ದು, ಅನುಮೋದಿತ TCS ನಂತೆ ರಸ್ತೆ ನಿರ್ಮಾಣಕ್ಕೆ ಬೇಕಾದ ಪದರ ರಚನೆಯ ದಪ್ಪ ಮತ್ತು ಪರಿಮಾಣದಂತೆ ಪ್ರತಿ ಪದರ ರಚನೆಯ ಸಾಂದ್ರತೆಯನ್ನು (Density) ಪರೀಕ್ಷೆಗೆ ಒಳಪಡಿಸಿ ನಿಯಂತ್ರಣ ಮಾಡುವುದರೊಂದಿಗೆ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಪ್ರತಿ ಹಂತಗಳಲ್ಲಿಯೂ ಇಲಾಖೆಯ ಗುಣ ನಿಯಂತ್ರಣ ಪ್ರಾಧಿಕಾರ ಹಾಗೂ ಇಲಾಖಾ ಮೇಲಾಧಿಕಾರಿಗಳು ಕಾಮಗಾರಿಯನ್ನು ಪರಿವೀಕ್ಷಣೆ ಮಾಡಿರುತ್ತಾರೆ. ಇದಲ್ಲದೇ ಕಾಮಗಾರಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ MORTH ನ Mobile Inspection Vehicle (MIV) ನೊಂದಿಗೆ ಅಧಿಕಾರಿಗಳು ಕಾಮಗಾರಿಯನ್ನು ಪರಿವೀಕ್ಷಿಸಿರುತ್ತಾರೆ. Vigilence Cell ವಿಭಾಗದ ಅಧಿಕಾರಿಗಳು ಕೂಡಾ ಪರಿವೀಕ್ಷಣೆ ಮಾಡಿರುತ್ತಾರೆ.<br>➢ ಮುಂದುವರೆದು ಕಾಮಗಾರಿ ಪೂರ್ಣಗೊಂಡ ನಂತರ 05 ವರ್ಷಗಳವರೆಗೆ ರಸ್ತೆಯನ್ನು ನಿರ್ವಹಣೆ ಮಾಡುವುದು ಸಂಪೂಣವಾಗಿ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯ ನಿರ್ವಹಣೆಯಲ್ಲಿ ಯಾವುದೇ ರೀತಿಯ ಕಳಪೆ ಕಾಮಗಾರಿ ಇರುವುದಿಲ್ಲ. ಹಾಗೂ ಶಿಸ್ತು ಕ್ರಮದ ಪ್ರಮೇಯ ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: ಲೋಇ 462 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು